**ಮೇಷ್ಟು:** ಬ್ರಿಟಿಷರು ತಮ್ಮ ಆಡಳಿತದ ಅವಧಿಯಲ್ಲಿ ಭಾರತದ ಸಂಪತ್ತನ್ನು ಕೊಳ್ಳೆ ಹೊಡೆದರು. ಇದು ಯಾವ ಕಾಲ?
**ವಿದ್ಯಾರ್ಥಿ:** ಕೊಳ್ಳೇಗಾಲ ಸಾರ್!

**ಪುಟ್ಟಂಜ:** ನೋಡಿ ಡಾಕ್ಟ್ರೇ, ಇವನು ಮುರುಳಿ ನನ್ನ ಮಗ. ಆರನೇ ಕ್ಲಾಸ್‌ಗೆ ಇವನು ಆರವತ್ತು ಕೆ.ಜಿ. ಅವ್ನೆ. ಕೂತ್ರೆ ಎದ್ದೇಳೋಕೆ ತಿಣುಕಾಡ್ತಾನೆ. ನಿಂತ್ರೆ ಕೂತ್ಕೊಳ್ಳೋಕೆ ಚೇರೇ ಬೇಕು ಅಂತಾನೆ.
**ಡಾಕ್ಟರ್:** (ಪುಟ್ಟಂಜನ ಮಗನತ್ತ ನೋಡಿ) ನೋಡಯ್ಯ ಇನ್ಮುಂದೆ ಬೇಕರಿಯಲ್ಲಿ ಏನೂ ತಿನ್ನಂಗಿಲ್ಲ.
**ಮುರುಳಿ:** ಸಾರ್ ಅವತ್ತಿಂದ ನಾನು ಬೇಕರಿಯಲ್ಲಿ ಏನೇನೋ ತಿನ್ನಲ್ಲ ಮನೆಗೆ ತಗೊಂಡೋಗಿ ತಿನ್ನೋದು.

**ಪುಟ್ಟಂಜ:** ಲೋ ನಂಜ, ನೀನು ಯಾವ ಟೀವಿ ನೋಡ್ತೀಯಾ?
**ನಂಜ:** ಸ್ಯಾಮ್‌ಸಂಗ್ ಟೀವಿ.

ಬಸ್‌ನ ಹಿಂದೆ ಓರ್ವ ಯುವಕ ಓಡುತ್ತಾ ಬರುತ್ತಿದ್ದದ್ದನ್ನು ಕನ್ನಡಿಯಲ್ಲಿ ಕಂಡ ಚಾಲಕ ಬಸ್ ನಿಲ್ಲಿಸಿದ.
**ಕಂಡಕ್ಟರ್:** ಬೇಗ ಹತ್ಕೊ.
**ಯುವಕ:** ಚಾರ್ಜ್ ಹತ್ ರೂಪಾಯಿ ಉಳಿಸೋಣಾ ಅಂತ ಓಡೋಡಿ ಬರ್ತಿದ್ದೀನಿ.
**ಕಂಡಕ್ಟರ್:** ಹಾಗಾದ್ರೆ ಆಟೊ ಹಿಂದೆ ಓಡೋಡಿ ಬಾ. ಹತ್ತೇನು ನೂರು ರೂಪಾಯಿನೇ ಉಳಿಯುತ್ತೆ.

**ಪ್ರೇಮ:** ಸ್ವಾಮಿಗಳೆ ನನ್ನ ಮುಂದಿನ ಜೀವನ ಹೇಗಿರುತ್ತೆ?
**ಸ್ವಾಮೀಜಿ:** ನೀವು ಯಾವ ಧಾರಾವಾಹಿ ನೋಡ್ತಿರೋ ಅದೇ ರೀತಿ ನಿಮ್ ಜೀವನ ಇರುತ್ತೆ.

**ಪುಟ್ಟಂಜ:** ಲೋ ನಂಜ, ಹೆಣ್ಮಕ್ಕಳೆ ಸ್ಟ್ರಾಂಗ್ ಯಾಕೆ ಆಗ್ತಾರೆ?
**ನಂಜ:** ಯಾಕಂದ್ರೆ ಹೆಣ್ಮಕ್ಕಳು ಅಮೃತಾಂಜನ್ ಸ್ಟ್ರಾಂಗ್ ಹಚ್ಕೋತಾರೆ.

**ಪುಟ್ಟಂಜ:** ಮಣ್ಣು ತಿಂದ್ರೂ ಮರೆಯಲ್ಲಿ ತಿನ್ಬೇಕು ಅಂತ ದೊಡ್ಡವ್ರು ಯಾಕೆ ಹೇಳವ್ರೆ?
**ನಂಜ:** ಯಾಕಂದ್ರೆ ಮಣ್ಣಿಗೆ ಬರಗಾಲದಲ್ಲೂ ಬಂಗಾರದ ಬೆಲೆ ಇರ್ತದೆ.

**ಮೇಷ್ಟು:** ಏನಯ್ಯ ಪುಟ್ಟಂಜ, ಮಗನನ್ನು ಯಾಕೆ ಸ್ಕೂಲ್‌ಗೆ ಕಳಿಸ್ತಿಲ್ಲ?
**ಪುಟ್ಟಂಜ:** ಓದು ಒಕ್ಕಾಲು ಬುದ್ಧಿ ಮುಕ್ಕಾಲು. ಒಕ್ಕಾಲು ಓದಿಗೆ ಮುಕ್ಕಾಲು ಬುದ್ಧಿ ಖರ್ಚು ಆಗುತ್ತೆ ಅಂತ ನಾನೇ ಬೇಡ ಅಂದೆ.

ಟೀವಿಯ ಬಗ್ಗೆ ಪ್ರಬಂಧ ಬರೆಯಿರಿ ಎಂಬ ಪ್ರಶ್ನೆಗೆ ಎಂಟನೆ ತರಗತಿ ವಿದ್ಯಾರ್ಥಿ ಮುರುಳಿ ಬರೆದ ಮೊದಲೆರಡು ಸಾಲುಗಳು – 'ಟೀವಿ ನೋಡುವವರು ಟೀವಿ ಮುಂದೆ ಇರುತ್ತಾರೆ. ಟೀವಿ ನೋಡದೆ ಇರುವವರು ಮುಂದೊಂದು ದಿನ ಟೀವಿಯಲ್ಲಿ ಬಂದೆ ಬರ್ತಾರೆ'.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ


1972 50 Years Golden Jubilee

# ರಾಜೇಂದ್ರ ಆಯುರ್ವೇದಿಕ್ ಕ್ಲಿನಿಕ್



**ಎಲ್ಲಾ ವಿಧದ ಕ್ಯಾನ್ಸರ್, ಪಾರ್ಶ್ವವಾಯು, ಸಂಧಿವಾತ, ಚರ್ಮ ರೋಗಗಳು, ಸೈನಸ್, ಅಸ್ತಮಾ, ಅಪಸ್ಮಾರ, ಖಿನ್ನತೆ, ಭಯ, ಆತಂಕ, ನಡುಕ ಇತ್ಯಾದಿ ಸೇರಿದಂತೆ ದೀರ್ಘಕಾಲದ ಕಾಯಿಲೆಗಳಿಗೆ ವಿಶೇಷ ವೈದ್ಯಕೀಯ ಚಿಕಿತ್ಸೆ.**

ಮಾನವರಲ್ಲಿ ರೋಗಗಳು ನಾಲ್ಕು ವಿಧದ ಕಾರಣಗಳಿಂದ ಉಂಟಾಗುತ್ತದೆ. ತಪ್ಪುಗಳು – ಅಪಘಾತಗಳು ವಂಶಪಾರಂಪರ್ಯ ಕಾರಣಗಳು ಹಿಂದಿನ ಜನ್ಮ ಕರ್ಮಗಳಿಂದ ಮನುಷ್ಯರು ಪ್ರಭಾವಿತರಾಗಿದ್ದಾರೆ.

**ವಿಜ್ಞಾನ ಆಕಾಶದೆತ್ತರಕ್ಕೆ ಬೆಳೆದು ಜಗತ್ತು ದಿನದಿಂದ ದಿನಕ್ಕೆ ಆಧುನಿಕವಾಗುತ್ತಿದ್ದರೂ ಮೇಲಿನ ಪ್ರಭಾವದ ಚಕ್ರದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ, ಅಪಘಾತಗಳು ಮತ್ತು ಅನುವಂಶಿಕ ಕಾಯಿಲೆಗಳಿಗೆ ಸಂಬಂಧಿಸಿದಂತೆ ವಿಜ್ಞಾನವು ನಮಗೆ ಉಪಯುಕ್ತವಾಗಿದೆ. ಆದರೆ ಕರ್ಮ ರೋಗಗಳ ಸಂದರ್ಭದಲ್ಲಿ ತಪ್ಪುಗಳು – ಅಪಘಾತಗಳು, ವಿಜ್ಞಾನವು ಖಂಡಿತವಾಗಿಯೂ ಉಪಯುಕ್ತವಲ್ಲ. ಏಕೆಂದರೆ ಕರ್ಮ ರೋಗಗಳು ಬರೀ ಔಷಧದಿಂದ ಗುಣವಾಗುವಂಥದ್ದಲ್ಲ.**

ಭಾರತೀಯ ವೈದ್ಯಕೀಯ ಪದ್ಧತಿಯು ಕರ್ಮ ರೋಗಗಳ ಬಗ್ಗೆ ವಿವರವಾಗಿ ವಿವರಿಸಿದೆ. ಕೆಲವರಿಗೆ ವಿನಾಕಾರಣ ಕಾಯಿಲೆಗಳು ಬರುತ್ತವೆ. ಕೆಲವರಿಗೆ ಎಷ್ಟೇ ಚಿಕಿತ್ಸೆ ನೀಡಿದರೂ ಗುಣವಾಗುವುದಿಲ್ಲ. ಕೆಲವರಿಗೆ ಸೂಕ್ತವಲ್ಲದ ಕಾಯಿಲೆಗಳು ಬರುತ್ತವೆ. ಇದರ ಬಗ್ಗೆ ದೀರ್ಘ ವಿವರಣೆಗಳನ್ನು ನೀಡಬಹುದು. ಡಾ.ಕೆ.ವಿ.ರಾಜೇಂದ್ರನ್ RAMP, DNYS, M.A., ಕಳೆದ 50 ವರ್ಷಗಳಿಂದ ರಾಜ್ಯ ಮಟ್ಟದಲ್ಲಿ ದೇವರು ಮತ್ತು ಗುರುಗಳ ಕೃಪೆಯಿಂದ ಇಂತಹ ಕ್ಲಿಷ್ಟಕರ ಮತ್ತು ಸಂಕೀರ್ಣ ಕಾಯಿಲೆಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡುತ್ತಿದ್ದಾರೆ.

**ಸರಿಯಾದ ಚಿಕಿತ್ಸೆ ದೊರೆಯದೆ ಜಿಗುಪ್ಸೆಗೊಂಡವರು ಕೂಡ ಒಂದು ಬಾರಿ ಭೇಟಿಯಾಗಿ, ಶಾಶ್ವತ ಪರಿಹಾರ ಪಡೆಯಿರಿ.**

**ನಡೆಯಲು ತೊಂದರೆಯಿರುವ ರೋಗಿಗಳಿಗೆ ಅವರವರ ಮನೆಗೆ ಬಂದು ಚಿಕಿತ್ಸೆ ಕೊಡುತ್ತೇವೆ.**

**ಬೆಂಗಳೂರಿನಲ್ಲಿ ಪ್ರತಿ ತಿಂಗಳ 6 ರಿಂದ 25 ರವರೆಗೆ ನೀವು ವೈದ್ಯರನ್ನು ವೈಯಕ್ತಿಕವಾಗಿ ಭೇಟಿ ಮಾಡಬಹುದು.**

ನಂ.4, 6ನೇ ಕ್ರಾಸ್, ಎಂ.ಎಸ್.ರಾಮಯ್ಯ ರಸ್ತೆ (ಎಚ್‌ಎಂಟಿ ರಸ್ತೆ),
ಅಯ್ಯಪ್ಪ ದೇವಸ್ಥಾನದ ಬಸ್ ನಿಲ್ದಾಣ, ಎಸ್ಸಾರ್ ಪೆಟ್ರೋಲ್ ಬಂಕ್ ಎದುರು,
ಸುಬೇದಾರಪಾಳ್ಯ, ಯಶವಂತಪುರ, ಬೆಂಗಳೂರು–22,

**ಮೊ : 9344455511**